**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು ಹುಕ್ಕೇರಿ**

CC No. 1006 /2021

CW- 6 / PW-5

ಹೆಸರು : ಸಲೀಮಹಮ್ಮದ ಮೊಹಮ್ಮದಲಿ ಮುಲ್ಲಾ
ವಯಸ್ಸು : 33 ವರ್ಷ
ಉದ್ಯೋಗ : ಭೂ ವಿಜ್ಞಾನಿ
ವಾಸಸ್ಥಳ : ಬೆಳಗಾವಿ

(ದಿನಾಂಕ 14-05-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆ : ಸಹಾಯಕ ಸರಕಾರಿ ಅಭಿಯೋಜಕರಿಂದ ಸರಕಾರದ ಪರವಾಗಿ -**

**1.** ನನಗೆ ಗಣಿ ಮತ್ತು ಭೂವಿಜ್ಞಾನಿ ಇಲಾಖೆಯ ಸಚಿವರ ಕಛೇರಿಯಿಂದ ನಮ್ಮ ಭೂವಿಜ್ಞಾನಿ ಕಛೇರಿಗೆ ಫೋನ ಬಂದಿದ್ದು ಅದರಲ್ಲಿ ಹಿಡಿಕಲ ಡ್ಯಾಂನ ಬ್ಯಾಕ ವಾಟರ್ಸನಲ್ಲಿ ಅಕ್ರಮವಾಗಿ ಮರಳು ಗಣಿಗಾರಿಕೆ ಆಗುತ್ತಿದೆ ಎಂದು ದೂರು ಬಂದಿತ್ತು . ನಮ್ಮ ಉಪನಿರ್ದೇಶಕರ ಆದೇಶದ ಮೇರೆಗೆ ದಿನಾಂಕ **10-6-2021** ರಂದು ಬೆಳಿಗ್ಗ **8-30** ಕ್ಕೆ ನಮ್ಮ ಕಛೇರಿ ವಾಹನ ಕೆಎ-**22** ಜಿ **0880** ವಾಹನದ ಚಾಲಕನಾದ ಮೌಲಾಸಾಬ ಪಡದಾರ ಇವರೊಂದಿಗೆ ಸಹ ವಿಜ್ಞಾನಿ ಆದ ತ್ರಿವಿಕ್ರಿಮ ಮಲವಾಚಾರಿ ಹಾಗೂ ಸುದೀಪ ಕುಲಕರ್ಣಿ , ವೆಂಕನಗೌಡಾ ಬಿರಾದಾರ ಪಾಟೀಲ ಮತ್ತು ನಾನು ಕೂಡಿಕೊಂಡು ಜಂಟಿಯಾಗಿ ಹಿಡಿಕಲ ಡ್ಯಾಂನ ಹಿನ್ನೀರಿನ ಪ್ರದೇಶವಾದ ಜಿನರಾಳ ಗ್ರಾಮದ ಪ್ರದೇಶಕ್ಕೆ ಬಂದಾಗ ಅಲ್ಲ ಏನೂ ಅಕ್ರಮ ಕಂಡು ಬಂದಿರುವುದಿಲ್ಲ. ನಾವು ಅಲ್ಲಿಂದ ಮುಂದುವರೆದು ಹಿಡಕಲ ಡ್ಯಾಂನಿಂದ ಚಿಲಭಾವಿ ಗ್ರಾಮಕ್ಕೆ ಹೋಗುವಾಗ ಹಿಡಿಕಲ ಡ್ಯಾಂನ ಬ್ಯಾಕ ವಾಟರ್ಸನಲ್ಲಿ ಪ್ರದೇಶದಲ್ಲಿ ಅಕ್ರಮವಾಗಿ ಗಣಿಗಾರಿಕೆ ಮಾಡಿ ಮರಳು ಸಾಗಾಟ ಮಾಡುತ್ತಿದ್ದ ವಾಹನ ಕಂಡು ಬಂತು. ನಾವುಗಳು ಅದನ್ನು ಬೆನ್ನಟ್ಟಿ ಹಿಡಿದೆವು. ಆ ಗಾಡಿಯನ್ನು ಅದೇ ವಾಹನದ ಚಾಲಕನ ಮೂಲಕ ನಾವು ಹಿಡಕಲ್ ಡ್ಯಾಂನ ಉಪಠಾಣೆಗೆ ಕರೆದುಕೊಂಡು ಹೋಗಿ ಬಿಟ್ಟೆವು. ಪುನಃ ನಾವು ರೌಂಡ್ಸ ಮಾಡಲು ಚಿಲಭಾವಿ ಕಡೆಗೆ ಬಂದೆವು . ಚಿಲಭಾವಿ ಗ್ರಾಮದ ವ್ಯಪ್ತಿಯಲ್ಲಿ ಅನಧಿಕೃತವಾಗಿ ಮರಳು ದಾಸ್ತಾನು ಮಾಡಿರುವುದು ಕಂಡು ಬಂತು. ಅದನ್ನು ಸೀಜ ಮಾಡಿ ಪಂಚನಾಮೆ ಮಾಡುವಾ ಎಂದು ಗ್ರಾಮ ಸಹಾಯಕರಾದ ಸುರೇಶ ಸನದಿ ಮತ್ತು ಬಾಳಪ್ಪ ಸನದಿ ಇವರನ್ನು ಸ್ದಳಕ್ಕೆ ಕರೆಸಿ ಪಂಚನಾಮೆ ಮಾಡಿದೆವು. ಸದರಿ ಮರಳನ್ನು ನಾವು ಲೋಕೋಪಯೋಗಿ ಇಲಾಖೆಗೆ ಹಸ್ತಾಂತರ ಮಾಡಿದೆವು. ಆಗ ಮಧ್ಯಾಹ್ನ **3-00** ಗಂಟೆ ಆಗಿತ್ತು . ಆ ಸಮಯದಲ್ಲಿ ಮುಖಕ್ಕೆ ಟವಲ ಮುಚ್ಚಿಕೊಂಡು **10-15** ಜನ ಕೈಯಲ್ಲಿ ಕಟ್ಟಿಗೆ ಹಾಗೂ ಕಲ್ಲುಗಳನ್ನು ಎಸೆಯುತ್ತ

ಅಲ್ಲಿಗೆ ಬಂದರು. ನಂತರ ನಾವು ಹೆದರಿ ಗಾಡಿ ಹತ್ತಿರ ಹೋದೆವು. ಆ ಜನ ಅಲ್ಲಿಗೂ ಬಂದು ನಮ್ಮ ಗಾಡಿ ಟಾಟಾ ಸುಮೊ ಇದರ ಗ್ಲಾಸ ಒಡೆದರು. ನಂತರ ನಾವು ಆ ಹಿನ್ನೀರು ಪ್ರದೇಶ ಬಿಟ್ಟು ಯಮಕನಮರಡಿ ಪೋಲಿಸ್ ಠಾಣೆಗೆ ಬಂದು ಚಾಸಾ-1 ರವರು ದೂರು ಕೊಟ್ಟರು. ಆ ಜನ ನಮ್ಮ ಕರ್ತವ್ಯಕ್ಕೆ ಅಡ್ಡಿ ಮಾಡಿದರು.

2. ನಾವು ಮರುದಿನ 11ನೇ ತಾರೀಖಿನಂದು ಪೋಲಿಸರ ಮುಂದೆ ಹೇಳಿಕೆ ನೀಡಿದೆವು. ಪನಃ 12-06-2021 ರಂದು ಪೋಲಿಸರು ನಮ್ಮನ್ನು ಕರೆಸಿದರು. ನಾವು ಯಮಕನಮರಡಿ ಪೋಲಿಸ್ ಠಾಣೆಗೆ ಹೋದೆವು. ಅಲ್ಲಿ 3 ಜನರನ್ನು ದಸ್ತಗೀರ ಮಾಡಿದ್ದರು. ಆ 3 ಜನರನ್ನು ನಮಗೆ ತೋರಿಸಿದರು. ಅವರ ಹೆಸರು 1) ಲಕ್ಷ್ಮಣ ಸಜಲಿ , 2) ಸಾತಪ್ಪ ಪೂಜಾರಿ , 3) ಸುರೇಶ ಇದ್ದರು. ಆ 3 ಜನ ಇನ್ನೂ 3 ಜನ ಆರೋಪಿತರು ಇದ್ದಾರೆ ಎಂದು ಪೋಲಿಸರಿಗೆ ಹೇಳಿದರು. ಅವರ ಹೆಸರು ಮಾರುತಿ ಕಾಟಾಬಳಿ , ಕೆಂಪಣ್ಣ ಕಾಟಾಬಳಿ ಹಾಗೂ ಗಂಗಪ್ಪ ಕಾಟಾಬಳಿ . ಈ 6 ಜನ ನಮ್ಮ ಸರಕಾರಿ ಕರ್ತವ್ಯಕ್ಕೆ ಅಡೆತಡೆ ಮಾಡಿರುತ್ತಾರೆ. ಈ 6 ಜನ ಆ ದಿನ ಇದ್ದರು ಎಂದು ಪೋಲಿಸರು ನಮಗೆ ಹೇಳಿದರು. ಆ 3 ಜನರನ್ನೂ ನಾವು ಗುರುತಿಸಿದೆವು. ನ್ಯಾಯಾಲಯದ ಮುಂದೆ ಇರುವ 6 ಜನರಲ್ಲಿ 3 ಜನರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನಮಗೆ ಹೊಡೆ ಬಡೆಯಲು ಉಪಯೋಗಿಸಿದ ಕಲ್ಲುಗಳನ್ನು ಮತ್ತು ಕಟ್ಟಿಗೆಗಳನ್ನು ಹಾಗೂ ಗಾಜಿನ ಚೂರುಗಳನ್ನು ಈ ದಿನ ನ್ಯಾಯಾಲಯದ ಮುಂದೆ ನೋಡುತ್ತಿದ್ದು ಅವುಗಳನ್ನು ಸಾಕ್ಷಿ ಗುರುತಿಸಿರುತ್ತಾರೆ. ಅವುಗಳನ್ನು ಈಗಾಗಲೇ ಮುಮಾ-1 ರಿಂದ 10 ಎಂದು ಗುರುತಿಸಲಾಗಿದೆ. ನಿ.ಪಿ-3 ರ ಫೊಟೊದಲ್ಲಿ ಕಾಣುತ್ತಿರುವ ಜಾಗ ಆರೋಪಿತರು ನಮ್ಮ ಗಾಡಿಗೆ ಕಲ್ಲು ಎಸೆದ ಜಾಗ ಆಗಿದ್ದು , ನಿ.ಪಿ-5 ಮತ್ತು 6 ನಮ್ಮ ಗಾಡಿಯ ಫೊಟೊ ಆಗಿರುತ್ತವೆ.

**ಪಾಟಿ ಸವಾಲುಃ ಆರೋಪಿ ಪರ ಶ್ರೀ ಆರ್ ಬಿ ಸಿ ವಕೀಲರಿಂದ -**

(ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)

**( ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆಳರಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೇ**

(ಆದಿತ್ಯ ಆರ್. ಕಲಾಲ್)
ಸಿ ಜೆ ಮತ್ತು ಜೆ ಎಂ ಎಫ್ ಸಿ , ಹುಕ್ಕೇರಿ